**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1027/2021**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.03**

**ದಿನಾಂಕಃ** 02.07.2025 **ಸಿಡಬ್ಲ್ಯೂ.04**

| | |
|---|---|
| ಹೆಸರು | ವಿರುಪಾಕ್ಷಪ್ಪ |
| ತಂದೆ ಹೆಸರು | ಗೋಣೆಪ್ಪ |
| ವಯಸ್ಸು | 52 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಬೆಳ್ಳೂಡಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ರವರ ಪರಿಚಯವಿದೆ. ಚಾಸಾ.5 ರವರ ಪರಿಚಯವಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಅಪಘತಕ್ಕೊಳಗಾದ ವಾಹನಗಳ ಅಮಾನತು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.4 (ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಈಗ್ಗೆ ಸುಮಾರು 4 ವರ್ಷದ ಹಿಂದೆ ಗ್ರಾಮಾಂತರ ಠಾಣೆಗೆ ಹೋದಾಗ ಚಾಸಾ.1 ರವರಿಗೆ ವಾಹನದಿಂದ ಅಪಘಾತವಾದಾಗ ವಾಹನಗಳನ್ನು ಬಿಡಿಸಿಕೊಳ್ಳುವ ವಿಚಾರವಾಗಿ ಮಾಡಿರುತ್ತೇನೆ. ಸದರಿ ಸಂದರ್ಭದಲ್ಲಿ ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರವನ್ನು ಈಗಾಗಲೇ ನಿಪಿ.5 ಮತ್ತು 6 ಎಂದು ಗುರುತಿಸಲಾಗಿದೆ. ಚಾಸಾ.1 ಮತ್ತು ಪೊಲೀಸರ ನಡುವೆ ಆದ ಮಾತುಕತೆ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಸಂದರ್ಭದಲ್ಲಿ ನಾನು ಮತ್ತು ಚಾಸಾ.5 ಹಾಜರಿದ್ದೆವು. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ. ಅಪಘಾತಕ್ಕೊಳಗಾದ ವಾಹನದ ನಂಬರ್ ನನಗೆ ನೆನಪಿಲ್ಲ. ನಿಪಿ.4 ಕ್ಕೆ ನಾನು ಮಧ್ಯಾಹ್ನ ಸುಮಾರು 4.00 ಗಂಟೆಗೆ ಮಾಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ 05.08.2020 ರಂದು ನನ್ನನ್ನು ಹಾಗೂ ಚಾಸಾ.5 ರವರನ್ನು ಹರಿಹರ ಗ್ರಾಮಾಂತರ ಠಾಣೆಯಲ್ಲಿ ಅಪಘಾತಕ್ಕೊಳಗಾದ ವಾಹನಗಳ ಪಂಚನಾಮೆಗೆ ಸಾಕ್ಷಿಯಾಗಿ ಸಹಿ ಮಾಡಬೇಕು ಎಂದು

ಪೊಲೀಸರು ಕೇಳಿಕೊಂಡಿದ್ದರು ಎಂದರೆ ಸರಿ. ಸದರಿ ಕಾಲಕ್ಕೆ ಚಾಸಾ.1 ರವರು ಹಾಜರಿದ್ದರು ಎಂದರೆ ಸರಿ. ನಮ್ಮ ಸಮಕ್ಷಮ ಅಪಘಾತಕ್ಕೊಳಗಾದ ವಾಹನಗಳಾದ ಕೆಎ/17 ಹೆಚ್ ಎ 7774 ಕಪ್ಪು ಬಣ್ಣದ ಬಜಾಜ್ ಬೈಕ್ ಮತ್ತು ಕೆಎ 17 ಹೆಚ್ ಪಿ 8642 ನೇ ಸಿಲ್ವರ್ ಬಣ್ಣದ ಹೋಂಡಾ ಶೈನ್ ಬೈಕ್ ಗಳನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಅಮಾನತು ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ 11.30 ಗಂಟೆಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಮತ್ತು ಚಾಸಾ.1 ಆತ್ಮೀಯರು ಎಂದರೆ ಸರಿ. ಸದರಿ ದಿನ ಸ್ಥಳದಲ್ಲಿ ಏನು ಮಾಡಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಸಹಿ ಮಾಡು ಎಂದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಚಾಸಾ.1 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ